ಬರಹ' ಅಂಕಣ ಬರಹಗಳ ಕೃತಿಯ ಮೊದಲ ಲೇಖನವೇ 'ಕಲಬುರ್ಗಿಯವರಿಲ್ಲದ ಕರ್ನಾಟಕದ ಸಂಕಟ' ಎಂದಿದೆ. ಸತ್ಯೋತ್ತರ ಕಾಲದಲ್ಲಿರುವ ನಮಗೆ ಸತ್ಯದೊಂದಿಗೆ ಅನವರತ ಜೀವಿಸಿದ ಕಲಬುರ್ಗಿಯವರ ಸಾವು ನಿಜಕ್ಕೂ ಕರ್ನಾಟಕಕ್ಕೆ ಸಂಕಟವನ್ನು ತಂದಿತ್ತಿದೆ.

ಪೋಲಂಕಿ ರಾಮಮೂರ್ತಿಯವರ ಪ್ರಖರ ವೈಚಾರಿಕ ಕೃತಿ 'ಸೀತಾಯಣ'ದ ಅರ್ಪಣೆಯನ್ನೊಮ್ಮೆ ಇಲ್ಲಿ ಯಥಾವತ್ತಾಗಿ ಉಲ್ಲೇಖಿಸಬೇಕು. ತೀವ್ರವಾಗಿ ಕಾಡುವ ಅರ್ಪಣೆಯಿದು; "ಒಲವೇ ಉಸಿರಾಗಿ ಉಸಿರಿತ್ತ ನನ್ನ ತಾಯಿ ಲಕ್ಷ್ಮಮ್ಮನಿಗೆ ಮತ್ತು ಯಾವ ನನ್ನ ತಾಯಿಯಂತಹವರನ್ನು ಹೆಣ್ಣುಮಕ್ಕಳು ಎಂದು ಕರೆಯಲಾಗದೋ, ಏಕೆಂದರೆ ಮಕ್ಕಳೆಂದು ಅವರನ್ನು ಅವಮಾನಿಸಲಾಗದು; ಹೆಂಗಸರು ಎಂದು ಕರೆಯಲಾಗದೋ, ಏಕೆಂದರೆ ಕನ್ನಡನಾಡಿನ ಕೆಲವೆಡೆಗಳಲ್ಲಿ ವೇಶ್ಯೆಯರಿಗೆ ಹಾಗೆನ್ನುತ್ತಾರೆ; ಸ್ತ್ರೀಯರು ಎಂದು ಕರೆಯಲಾಗದೋ, ಏಕೆಂದರೆ ಸ್ತ್ರೀಯರೆಂದರೆ ಹೆರುವವರು; ಆದ್ದರಿಂದ ಅವರನ್ನು ಹೆರುವಿಗೆ ಹಿಂಗಿಸಲಾರೆವು- ಅಂತಹ ಮುಟ್ಟಾಗಿಯೂ ಮುಟ್ಟದವರಾಗಿರುವ, ಹೆತ್ತೂ ಸೂತಕದವರಾಗಿರುವ, ಅನಾಮಧೇಯೀ ಅಸ್ಪೃಶ್ಯೆಯರಿಗೆ ಏಕೆಂದರೆ, ಯಾವ ವರದಕ್ಷಿಣೆಗಾಗಿ, ವೈಧವ್ಯಕ್ಕಾಗಿ, ದುರಾಕ್ರಮಣಕ್ಕಾಗಿ ನಿತ್ಯವೂ ರಾಮರ ಬೆಂಕಿಗೆ ಬೀಳುತ್ತಾ, ರಾಮರ ಉಪೇಕ್ಷೆಯಿಂದ ಕಾಕಾಸುರರ ಅತ್ಯಾಚಾರಕ್ಕೀಡಾಗುತ್ತಾ, ರಾಮರ ಪರಿತ್ಯಾಗದಿಂದ ವನವಾಸ ಪಡುತ್ತಿದ್ದಾರೋ ಅವರು ವಾಲ್ಮೀಕಿ ರಾಮಾಯಣದ ಸಾಕ್ಷಾತ್ ಸೀತೆಯನ್ನು ಕಂಡುಕೊಂಡು, ಅವಳಂತೆ ಸಹಜವಾಗಿ, ಮಾನವೀಯವಾಗಿ ಸಹಜತೆ, ಮಾನವೀಯತೆ, ಪ್ರೇಮಗಳಲ್ಲಿ ಫಲಿಸಿ ವ್ಯಕ್ತಿವಿಶೇಷರಾಗಿ, ಅಂಕಿತ ನಾಮರಾಗಲೆಂದು ಹಂಬಲಿಸಿ".

ಅರ್ಪಣೆಯಲ್ಲಿರುವ ಹಂಬಲವನ್ನು ಓದುಗರು ಸೂಕ್ಷ್ಮವಾಗಿ ಗಮನಿಸಬೇಕೆಂದೇನಿಲ್ಲ. ಇಲ್ಲಿನ ಪದಗಳನ್ನು ಸುಮ್ಮನೆ ಓದಿದರೆ ಸಾಕು, ನಮ್ಮ ಸಮಾಜದಲ್ಲಿರುವ ಕೊಳಕಿನ ಬಗೆಯನ್ನು ತಾವೇ ತಾವಾಗಿ ಆ ಪದಗಳು ಹೊರಹಾಕುತ್ತಿವೆ. ಲೇಖಕರಿಗೆ ಲಿಂಗರಾಜಕಾರಣದ ಸಮಾಜದಲ್ಲಿ ನಮ್ಮೆಲ್ಲರ ತಾಯಿಯೂ ಅಸ್ಪೃಶ್ಯಳಾಗಿರುವುದು, ಪುರುಷನ ಉನ್ಮತ್ತ ಅಟಾಟೋಪಗಳಿಗೆ ಹೆಣ್ಣೇ ಸಾಧನ ಮತ್ತು ಸಲಕರಣೆಯಾಗಿರುವುದು ತೀವ್ರವಾಗಿ ಡಿಸ್ಟರ್ಬ್ ಮಾಡಿದೆ. ಅದಕ್ಕೆ ನಮ್ಮ ಸಿದ್ಧಮಾದರಿಯ ಪೌರಾಣಿಕ ಪಾತ್ರಗಳ ಬೆಂಬಲ ಪಡೆದು ಅವಳನ್ನು ಅಕ್ಷತಾಕನ್ಯೆ ಅಥವಾ ರಾಕ್ಷಸಿಯನ್ನಾಗಿ ರೂಪಿಸಲು ಇನ್ನು ಪ್ರಯತ್ನಗಳು ಭರದಿಂದ ಸಾಗಿವೆ. ತಮ್ಮ 'ಅವ್ವ' ಕವಿತೆಯಲ್ಲಿ 'ಸತಿ ಸಾವಿತ್ರಿ, ಊರ್ಮಿಳೆ, ಜಾನಕಿಯರಲ್ಲ' ಎಂದು ಲಂಕೇಶರು ಸ್ಥಾಪಿತ ಮಾದರಿಗಳನ್ನು ನಿರಾಕರಿಸುವುದು ಈ ಕಾರಣಕ್ಕಾಗಿಯೇ. ಯಾವ ಸಿದ್ಧ ಮಾದರಿಗಳಿಗೂ ತಲೆಗೊಡದೆ ಬದುಕೇ ದೊಡ್ಡದೆಂದು ಭಾವಿಸಿ ಬದುಕುವ ಇಂತಹ ಅಸಂಖ್ಯ ಅಜ್ಞಾತರಿಂದಲೇ ನಮ್ಮ ಸಾಮಾಜಿಕ ಪರಿಸರ ಸಹನೀಯವಾಗಿದೆ. ಯಾವ ರಾಮಾಯಣದ ಸೀತೆಯ ಮಾದರಿಯ ಮೂಲಕ ಇಲ್ಲಿನ ಹೆಣ್ಣನ್ನು ಮಾಪನ ಮಾಡಲಾಗುತ್ತದೆಯೋ ಆ ರಾಮಾಯಣವನ್ನು ಸೀತಾಯಣವಾಗಿಸಲು ಹೊರಟು ಪೋಲಂಕಿ ಅಪಾರ ನೋವುಂಡರು. ಭಾರತದ ಸಮಾಜದಲ್ಲಿ ಸ್ತ್ರೀಸುಧಾರಣೆ ಅರ್ಥಾತ್ ಸಮ ಸಮಾಜ ಕಟ್ಟಲು ಹೊರಡುವ ಸ್ತ್ರೀವ್ಯಕ್ತಿತ್ವವುಳ್ಳ ಮನಸುಗಳಿಗೆ ಗೆಲುವು ಸುಲಭವಾದದ್ದಲ್ಲ. ಹಿಂದೂ ಕೋಡ್ ಬಿಲ್ಲನ್ನು ತಯಾರಿಸಿ ಮಂಡನೆ ಮಾಡಲು ಹೊರಟ ಅಂಬೇಡ್ಕರ್ ಅವರಿಗೆ ಸದನದಲ್ಲಿ ಸೋಲಾಗಿ ಅವರು ರಾಜೀನಾಮೆ ಕೊಡಬೇಕಾಯಿತು. ಸರೋಜಿನಿ ನಾಯ್ಡು ಅವರು ಮಸೂದೆ ಜಾರಿಗೆ ಬಂದರೆ ಅಮರಣಾಂತ ಉಪವಾಸ ಕೂರುತ್ತೇನೆಂದು ಬೆದರಿಸಿದರು. ಹಿಂದೂ ಕೋಡ್ ಬಿಲ್‌ನಲ್ಲಿರುವ ಸಾರಾಂಶಗಳನ್ನು ಉಪಾದಿ ವಿಹೀನನಾಗಿ ಪೂರ್ಣ ಮನಸ್ಸಿನಿಂದ ಓದಿದರೆ ಅದೊಂದು ಉತ್ಕೃಷ್ಟ ಮಹಾಕಾವ್ಯದಂತಿರುವ ಸನ್ನದು ಎಂದು ಎದೆಗೆ

